ಕರ್ನಾಟಕ ಸರ್ಕಾರ
**ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ, ಹೊಸ ಸಾರ್ವಜನಿಕ ಕಛೇರಿಗಳು,**
**ನೃಪತುಂಗ ರಸ್ತೆ, ಬೆಂಗಳೂರು**

**ಸಂಖ್ಯೆ : ಸಿ5(2)ಸ.ನಿ.(ವಾ)ಜ್ಯೇ.ಪ.–05/2019–20** **ದಿನಾಂಕ: 06–07–2019**

**ಅಧಿಸೂಚನೆ**

ವಿಷಯ :– ಸಾರ್ವಜನಿಕ ಶಿಕ್ಷಣ ಇಲಾಖೆಯ ಸಹಾಯಕ ನಿರ್ದೇಶಕರು(ವಾಣಿಜ್ಯ) ರಾಜ್ಯ ಮಟ್ಟದ ಕ್ರೋಢೀಕೃತ ಅಂತಿಮ ಜೇಷ್ಠತಾ ಪಟ್ಟಿ ದಿನಾಂಕ : 01/01/2019 ರಲ್ಲಿದ್ದಂತೆ ಹೊರಡಿಸುವ ಬಗ್ಗೆ.

ಉಲ್ಲೇಖ :– ಸರ್ಕಾರದ ಆದೇಶ ಸಂಖ್ಯೆ : ಸಿಆಸುಇ 186 ಎಸ್‌ಆರ್‌ಎಸ್ 2018, ದಿನಾಂಕ: 27/02/2019.

2 :– ಸರ್ಕಾರದ ಆದೇಶ ಸಂಖ್ಯೆ : ಸಿಆಸುಇ 186 ಎಸ್‌ಆರ್‌ಎಸ್ 2018, ದಿನಾಂಕ: 15/05/2019.

3 :– ಈ ಕಛೇರಿ ಅಧಿಕೃತ ಜ್ಞಾಪನ ಸಂಖ್ಯೆ: ಸಿ5(2)ಮುಂಬಡ್ತಿ–01/2018–19, ದಿನಾಂಕ: 21/05/2019.

4 :– ಈ ಕಛೇರಿ ಅಧಿಸೂಚನೆ ಸಂಖ್ಯೆ : ಸಿ5(2)ಸ.ನಿ.(ವಾ)ಜ್ಯೇ.ಪ.–05/2019–20, ದಿನಾಂಕ : 27/05/2019

*******

1. ಕರ್ನಾಟಕ (ರಾಜ್ಯದ ಸಿವಿಲ್ ಸೇವೆಗಳಲ್ಲಿನ ಹುದ್ದೆಗಳಿಗೆ) ಮೀಸಲಾತಿ ಆಧಾರದ ಮೇಲೆ ಬಡ್ತಿ ಹೊಂದಿರುವ ಸರ್ಕಾರಿ ನೌಕರರಿಗೆ ತತ್ಪರಿಣಾಮವಾದ ಜ್ಯೇಷ್ಠತೆಯನ್ನು ವಿಸ್ತರಿಸುವ 2017 ರ ಅಧಿನಿಯಮವನ್ನು ಅನುಷ್ಠಾನಗೊಳಿಸುವ ಸಲುವಾಗಿ ಉಲ್ಲೇಖಿತ (1)ರಲ್ಲಿ ಓದಲಾದ ದಿನಾಂಕ : 27/02/2019ರ ಸರ್ಕಾರದ ಆದೇಶದಲ್ಲಿ ಒಳಗೊಂಡಿರುವ ಸೂಚನೆಗಳನ್ವಯ ಎಲ್ಲಾ ನೇಮಕಾತಿ ಪ್ರಾಧಿಕಾರಿಗಳು ಕ್ರಮತೆಗೆದುಕೊಳ್ಳತಕ್ಕದ್ದು ಎಂದು ಉಲ್ಲೇಖ (2)ರಲ್ಲಿ ಸರ್ಕಾರ ಆದೇಶಿಸಿರುತ್ತದೆ.

2. ಮೇಲೆ (1)ರಲ್ಲಿ ಓದಲಾದ ದಿನಾಂಕ : 27/02/2019ರ ಸರ್ಕಾರಿ ಆದೇಶದ ಕಂಡಿಕೆ 8ರ ಉಪಕಂಡಿಕೆ (1) ರನ್ವಯ ಕ್ರಮ ತೆಗೆದುಕೊಂಡ ನಂತರ, ಸದರಿ ಆದೇಶದ ಕಂಡಿಕೆ 8ರ ಉಪಕಂಡಿಕೆ (2) ರಲ್ಲಿ ಉಲ್ಲೇಖಿಸಲಾದ ಕರ್ನಾಟಕ ರಾಜ್ಯ ಸಿವಿಲ್ ಸೇವಾ (ಮುಬಂಡ್ತಿ ವೇತನ ಮತ್ತು ಪಿಂಚಣಿಗಳ ಕ್ರಮಬದ್ಧತೆ) ಅಧಿನಿಯಮ, 1973ರ ಸೆಕ್ಷನ್ 4, 5 ಮತ್ತು 6ನ್ನು ಸೆಕ್ಷನ್ 9ರೊಡನೆ ಸಹವಾಚನ ಮಾಡಿಕೊಂಡು, ಇವುಗಳನ್ವಯ ತಾತ್ಕಾಲಿಕ/ಅಂತಿಮ ಜ್ಯೇಷ್ಠತಾ ಪಟ್ಟಿಗಳನ್ನು ಸಿದ್ದಪಡಿಸಿ ಪ್ರಕಟಿಸುವ, ಅರ್ಹತಾ ದಿನಾಂಕಗಳನ್ನು ನಿಗಧಿ ಪಡಿಸುವ, ಮುಂಬಡ್ತಿಗಳನ್ನು ಪುನರಾವಲೋಕನ ಮಾಡುವ, ವೇತನ ಮತ್ತು ಪಿಂಚಣಿಗಳನ್ನು ನಿಗಧಿ ಪಡಿಸುವುದನ್ನು ಒಳಗೊಂಡ ಪ್ರಕ್ರಿಯೆನ್ನು ಪೂರ್ಣಗೊಳಿಸತಕ್ಕದ್ದು ಎಂದು ಉಲ್ಲೇಖ (2)ರಲ್ಲಿ ಸರ್ಕಾರದ ಆದೇಶವಿರುತ್ತದೆ.

3. ಉಲ್ಲೇಖ (1) ಮತ್ತು (2)ರ ಸರ್ಕಾರದ ಆದೇಶಗಳು ಹಾಗೂ 2017ರ ಅಧಿನಿಯಮ ಮತ್ತು ಕರ್ನಾಟಕ ಸರ್ಕಾರಿ ನೌಕರರ (ಜ್ಯೆಷ್ಠತಾ ನಿಯಮಗಳು, 1957ರ ನಿಯಮಗಳಂತೆ ಸಾರ್ವಜನಿಕ ಶಿಕ್ಷಣ ಇಲಾಖೆಯ ಸಹಾಯಕ ನಿರ್ದೇಶಕರು(ವಾಣಿಜ್ಯ) ವೃಂದದ ರಾಜ್ಯ ಮಟ್ಟದ ಪರಿಷ್ಕೃತ ಹಾಗೂ ಕ್ರೋಡೀಕೃತ ತಾತ್ಕಾಲಿಕ ಜ್ಯೇಷ್ಠತಾ ಪಟ್ಟಿಯನ್ನು ದಿನಾಂಕ : 01/01/2019 ರಲ್ಲಿದ್ದಂತೆ ಪ್ರಕಟಿಸಲಾಗಿತ್ತು ಹಾಗೂ ಸದರಿ ತಾತ್ಕಾಲಿಕ ಜ್ಯೇಷ್ಠತಾ ಪಟ್ಟಿಯನ್ನು ಇಲಾಖೆಯ ಅಂತರಜಾಲದಲ್ಲಿಯೂ ಸಹಾ ಪ್ರಕಟಿಸಿ, ತಾತ್ಕಾಲಿಕ ಜ್ಯೇಷ್ಠತಾ ಪಟ್ಟಿಯಿಂದ ಬಾಧಿತರಾದ ನೌಕರರ ಆಕ್ಷೇಪಣೆಯನ್ನು ಸಲ್ಲಿಸುವಂತೆ ಸೂಚಿಸಲಾಗಿತ್ತು.

4. ಈ ಕಛೇರಿಯ ಉಲ್ಲೇಖಿತ (4)ರ ಅಧಿಸೂಚನೆಯಲ್ಲಿ ಪ್ರಕಟಿಸಲಾಗಿದ್ದ ಸಹಾಯಕ ನಿರ್ದೇಶಕರು(ವಾಣಿಜ್ಯ) ವೃಂದದ ರಾಜ್ಯ ಮಟ್ಟದ ಪರಿಷ್ಕೃತ ಹಾಗೂ ಕ್ರೋಡೀಕೃತ ತಾತ್ಕಾಲಿಕ ಜ್ಯೇಷ್ಠತಾ ಪಟ್ಟಿಗೆ ಯಾವುದೇ ಆಕ್ಷೇಪಣೆಗಳು ಸ್ವೀಕೃತವಾಗಿರುವುದಿಲ್ಲ. ದಿನಾಂಕ : 01/01/2019ರಲ್ಲಿದ್ದಂತೆ ಇರುವ ಸಹಾಯಕ ನಿರ್ದೇಶಕರು(ವಾಣಿಜ್ಯ) ವೃಂದದ ರಾಜ್ಯ ಮಟ್ಟದ ಅಂತಿಮ ಜ್ಯೇಷ್ಠತಾ ಪಟ್ಟಿಯನ್ನು ಈ ಅಧಿಸೂಚನೆಯೊಂದಿಗೆ ಲಗತ್ತಿಸಿರುವ ಅನುಬಂಧ-1ರಲ್ಲಿ ಪ್ರಕಟಿಸಲಾಗಿದೆ. ಸದರಿ ಜ್ಯೇಷ್ಠತಾ ಪಟ್ಟಿಯನ್ನು **ಇಲಾಖೆಯ ಅಂತರಜಾಲ www.schooleducation.kar.nic.in ರಲ್ಲಿಯೂ ಸಹ ಪ್ರಕಟಿಸಲಾಗಿದೆ.**

ಆಯುಕ್ತರು
ಸಾರ್ವಜನಿಕ ಶಿಕ್ಷಣ ಇಲಾಖೆ

ಇವರಿಗೆ:

1. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ, ಶಿಕ್ಷಣ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು ರವರಿಗೆ ಮಾಹಿತಿಗಾಗಿ.
2. ರಾಜ್ಯ ಯೋಜನಾ ನಿರ್ದೇಶಕರು, ಸರ್ವ ಶಿಕ್ಷಣ ಅಭಿಯಾನ ಮತ್ತು ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ, ಬೆಂಗಳೂರು ಮುಂದಿನ ಕ್ರಮಕ್ಕಾಗಿ.
3. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಕಲಬುರ್ಗಿ ಇವರಿಗೆ ಮುಂದಿನ ಕ್ರಮಕ್ಕಾಗಿ.
4. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ ಇವರಿಗೆ ಮುಂದಿನ ಕ್ರಮಕ್ಕಾಗಿ.
5. ರಾಜ್ಯದ ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ನಿರ್ದೇಶಕರಿಗೆ ಮುಂದಿನ ಕ್ರಮಕ್ಕಾಗಿ.
6. ರಾಜ್ಯದ ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ಸಹ ನಿರ್ದೇಶಕರಿಗೆ ಮುಂದಿನ ಕ್ರಮಕ್ಕಾಗಿ.
7. ರಾಜ್ಯದ ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ಜಂಟಿ ನಿರ್ದೇಶಕರಿಗೆ ಮುಂದಿನ ಕ್ರಮಕ್ಕಾಗಿ.
8. ರಾಜ್ಯದ ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ಜಿಲ್ಲಾ ಉಪ ನಿರ್ದೇಶಕರು (ಆಡಳಿತ) ಮುಂದಿನ ಕ್ರಮಕ್ಕಾಗಿ.
9. ರಾಜ್ಯದ ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ಜಿಲ್ಲಾ ಉಪ ನಿರ್ದೇಶಕರು (ಅಭಿವೃದ್ಧಿ) ಮುಂದಿನ ಕ್ರಮಕ್ಕಾಗಿ.
10. ರಾಜ್ಯದ ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಮುಂದಿನ ಕ್ರಮಕ್ಕಾಗಿ.
11. ಸಂಬಂಧಿಸಿದ ಕಛೇರಿ ಮುಖ್ಯಸ್ಥರಿಗೆ ಮುಂದಿನ ಕ್ರಮಕ್ಕಾಗಿ
12. ಕಛೇರಿ ಪ್ರತಿ.

**ಈ ತಾತ್ಕಾಲಿಕ ಜ್ಯೆಷ್ಠತಾ ಪಟ್ಟಿಯನ್ನು ಇಲಾಖೆಯ ಅಂತರಜಾಲ www.schooleducation.kar.nic.in ರಲ್ಲಿ ಪ್ರಕಟಿಸಲಾಗಿದೆ.**

ಅನುಬಂಧ

## ಸಾರ್ವಜನಿಕ ಶಿಕ್ಷಣ ಇಲಾಖೆಯ ಸಹಾಯಕ ನಿರ್ದೇಶಕರು (ವಾಣಿಜ್ಯ ಶಿಕ್ಷಣ) ವೃಂದದ ರಾಜ್ಯ ಮಟ್ಟದ ಅಂತಿಮ ಜ್ಯೇಷ್ಠತಾ ಪಟ್ಟಿ

(ದಿನಾಂಕ : 01/01/2019 ರಲ್ಲಿದ್ದಂತೆ)

| ಜ್ಯೇಷ್ಠತಾ ಸಂಖ್ಯೆ | ಅಧಿಕಾರಿಗಳ ಹೆಸರು ಶ್ರೀಮತಿ / ಶ್ರೀ | ಜನ್ಮ ದಿನಾಂಕ | ಶೀಘ್ರಲಿಪಿಗಾರರ ಹುದ್ದೆಗೆ ಬಂದ ವಿಧಾನ | ಶೀಘ್ರಲಿಪಿಗಾರರ ಹುದ್ದೆಗೆ ನೇಮಕಾತಿ / ಬಡ್ತಿ ಹೊಂದಿದ ದಿನಾಂಕ | ಸಹಾಯಕ ನಿರ್ದೇಶಕರು (ವಾಣಿಜ್ಯ) ಹುದ್ದೆಗೆ ಬಡ್ತಿ ಹೊಂದಿದ ದಿನಾಂಕ | ಪ್ರವರ್ಗ | ಷರಾ |
|---|---|---|---|---|---|---|---|
| 1 | ಎನ್.ಎಸ್. ಚಂದ್ರಶೇಖರ ವಿದ್ಯಾಸಾಗರ | 12–10–1939 | ಪಿ.ಆರ್ | 06–08–1970 | 03–01–1980 | | ನಿವೃತ್ತರಾಗಿರುತ್ತಾರೆ |
| 2 | ಜಿ.ವಿ. ಹನುಮಯ್ಯ | 16–02–1953 | ಪಿ.ಆರ್ | 26–11–1981 | 12–07–1995 | ಪ.ಜಾತಿ | ಹಿ.ಸ.ನಿ. ಹುದ್ದೆಗೆ ಬಡ್ತಿ ಹೊಂದಿ, ನಿವೃತ್ತರಾಗಿರುತ್ತಾರೆ |
| 3 | ಹೆಚ್.ಎನ್. ವಿಜಯಲಕ್ಷ್ಮಿ | 20–07–1958 | ಡಿ.ಆರ್ | 30–07–1979 | 17–04–2001 | ಇತರೆ | ಹಿ.ಸ.ನಿ. ಹುದ್ದೆಗೆ ಬಡ್ತಿ ಹೊಂದಿ, ನಿವೃತ್ತರಾಗಿರುತ್ತಾರೆ |
| 4 | ಎಲ್. ಭಾಸ್ಕರ್ | 20–08–1945 | ಪಿ.ಆರ್ | 22–10–1974 | 17–04–2001 | ಇತರೆ | ನಿವೃತ್ತರಾಗಿರುತ್ತಾರೆ |
| 5 | ಸುಮಿತ್ರ ಆರ್ ಕುಲಕರ್ಣಿ | 15–05–1966 | ಡಿ.ಆರ್ | 30–07–1988 | 21–04–2001 | ಇತರೆ | |
| 6 | ನಾಗರಾಜ ಎಸ್ ಡೋಣಿ | 01–05–1969 | ಪಿ.ಆರ್ | 26–04–1990 | 11–06–2009 | ಇತರೆ | ಪತ್ರಾಂಕಿತ ಸಹಾಯಕರ ಹುದ್ದೆಗೆ ವೃಂದ ಬದಲಾವಣೆ ಮಾಡಿಕೊಂಡಿರುತ್ತಾರೆ |
| 7 | ಹೇಮಲತಾ ಡಿ ನಾಯಕ್ | 10–02–1961 | ಡಿ.ಆರ್ | 29–11–1991 | 01–07–2011 | ಇತರೆ | |
| 8 | ಪಿ. ಶಿವಕುಮಾರ್ | 01–07–1975 | ಪಿ.ಆರ್ | 27–02–2001 | 28–02–2012 | ಇತರೆ | |
| 9 | ಎನ್. ಜಿ. ಉಡುಪ, | 29–09–1960 | ಪಿ.ಆರ್ | 03–07–1998 | 09–08–2012 | ಇತರೆ | |
| 10 | ಜಿ. ದೇವರಾಜು, | 26-01-1966 | ಡಿ.ಆರ್ | 25–02–2000 | 12–02–2014 | ಇತರೆ | ಪತ್ರಾಂಕಿತ ಸಹಾಯಕರ ಹುದ್ದೆಗೆ ವೃಂದ ಬದಲಾವಣೆ ಮಾಡಿಕೊಂಡಿರುತ್ತಾರೆ |
| 11 | ಎಸ್. ಪ್ರಮೀಳ | 13-07-1978 | ಡಿ.ಆರ್ | 28–02–2000 | 15–03–2016 | ಇತರೆ | |

ಆಯುಕ್ತರು

ಸಾರ್ವಜನಿಕ ಶಿಕ್ಷಣ ಇಲಾಖೆ